‘1979ರಿಂದ ಅಮೆರಿಕದ ಔದ್ಯಮಿಕ ಕ್ಷೇತ್ರದಲ್ಲಿ ನೌಕರರ ಸಂಖ್ಯೆ ಕಡಿಮೆಯಾಗುತ್ತಲೇ ಬಂದಿದೆ. ಕಾರ್ಮಿಕರ ಕೆಲಸಗಳನ್ನು ನಿರ್ವಹಿಸಬಲ್ಲ ಯಂತ್ರಗಳ ಅನ್ವೇಷಣೆ ನಿರಂತರವಾಗಿ ಆಗುತ್ತಲೇ ಇದೆ. ಇದರಿಂದ ಹೊಸ ಉದ್ಯೋಗಗಳು ಸೃಷ್ಟಿಯಾಗಿವೆ. ಕಾರ್ಮಿಕರು ಕೂಡ ತಮ್ಮ ಕೌಶಲಗಳನ್ನು ಹೆಚ್ಚಿಸಿಕೊಂಡು ಹೊಸ ಉದ್ಯೋಗಗಳತ್ತ ಮುಖ ಮಾಡಿದ್ದಾರೆ.’



ಕಂಪೆನಿಯ ಡಿಜಿಟಲ್ ಆರ್ಥಿಕತೆಯ ಬೆಳವಣಿಗೆಗೆಂದು ಹೆಚ್ಚು ಬಂಡವಾಳ ತೊಡಗಿಸಿದ್ದಾರೆ. ‘ಮುಂದಿನ ಐದು ವರ್ಷಗಳಲ್ಲಿ ಮನುಷ್ಯರು, ಯಂತ್ರಗಳು ಒಟ್ಟಾಗಿ ಕೆಲಸ ಮಾಡುವ ಪ್ರಕ್ರಿಯೆಯಲ್ಲಿ ಗಣನೀಯ ಬದಲಾವಣೆ ಆಗಲಿದೆ. ಮಧ್ಯಮ ಹಾಗೂ ಸಣ್ಣ ಪ್ರಮಾಣದ ಕೆಲಸಗಳನ್ನು ಮಾಡುವ ನೌಕರರ ಸಂಖ್ಯೆ ಬಹಳಷ್ಟು ಮಟ್ಟಿಗೆ ಕಡಿಮೆಯಾಗಲಿದೆ. ಹಾಗೆಂದು, ಅವರೆಲ್ಲ ಕೆಲಸ ಕಳೆದುಕೊಳ್ಳುತ್ತಾರೆ ಎಂದರ್ಥವಲ್ಲ. ಅವರೆಲ್ಲ ಹೊಸ ರೀತಿ ಯೋಚಿಸುತ್ತಾ, ಬೇರೆ ಮಜಲಿಗೆ ಹೊರಳಿಕೊಳ್ಳುವ ಮನಸ್ಸು ಮಾಡಬೇಕು. ಅದಕ್ಕೆ ಯಂತ್ರಕ್ರಾಂತಿ ಇಂಬುಗೊಡುವುದರಲ್ಲಿಯೂ ಅನುಮಾನವಿಲ್ಲ’ ಎನ್ನುವುದು ಮೆಕೆಫೆ ಮಾತು.

1979ರಿಂದ ಅಮೆರಿಕದ ಔದ್ಯಮಿಕ ಕ್ಷೇತ್ರದಲ್ಲಿ ನೌಕರರ ಸಂಖ್ಯೆ ಕಡಿಮೆಯಾಗುತ್ತಲೇ ಬಂದಿದೆ. ಕಾರ್ಮಿಕರ ಕೆಲಸಗಳನ್ನು ನಿರ್ವಹಿಸಬಲ್ಲ ಯಂತ್ರಗಳ ಅನ್ವೇಷಣೆ ನಿರಂತರವಾಗಿ ಆಗುತ್ತಲೇ ಇದೆ. ಇದರಿಂದ ಹೊಸ ಉದ್ಯೋಗಗಳು ಸೃಷ್ಟಿಯಾಗಿವೆ. ಕಾರ್ಮಿಕರು ಕೂಡ ತಮ್ಮ ಕೌಶಲಗಳನ್ನು ಹೆಚ್ಚಿಸಿಕೊಂಡು ಹೊಸ ಉದ್ಯೋಗಗಳತ್ತ ಮುಖ ಮಾಡಿದ್ದಾರೆ.

ಮೆಕೆಫೆ ಈ ಪ್ರಕ್ರಿಯೆಯನ್ನು ‘ಮನುಷ್ಯ ಹಾಗೂ ಯಂತ್ರಗಳ ನಡುವಿನ ಹೋರಾಟ’ ಎಂದೇ ಬಣ್ಣಿಸುತ್ತಾರೆ. ಪ್ರತಿ ಔದ್ಯಮಿಕ ಯುಗವೂ ದೊಡ್ಡ ಪಲ್ಲಟಗಳನ್ನು ಕಂಡಿದ್ದು, ನೌಕರರು ಅವುಗಳನ್ನು ಜೀರ್ಣಿಸಿಕೊಂಡೇ ಬದುಕುತ್ತಿದ್ದಾರೆ. ಯಂತ್ರಗಳು ಬಂದಮಾತ್ರಕ್ಕೆ ನಿರುದ್ಯೋಗ ಸಮಸ್ಯೆ ಹೆಚ್ಚಾಗುತ್ತದೆ ಎಂದರ್ಥವಲ್ಲ. ಅದು ಸೃಷ್ಟಿಸಬಹುದಾದ ಕಂದಕವನ್ನು ಹಾರುವ ಸಾಮರ್ಥ್ಯ ಕುಶಲ ಕೆಲಸಗಾರರಿಗೆ ಇದ್ದೇ ಇರುತ್ತದೆ ಎನ್ನುವುದು ಅವರ ವಾದ.

### ಕಳೆದ ಶತಮಾನದ ತತ್ವ

ಹತ್ತೊಂಬತ್ತನೆಯ ಶತಮಾನದಲ್ಲಿ ಯಂತ್ರ ತತ್ವ ಪ್ರತಿಪಾದಕರು ಮೊದಲು ತಲೆ ಎತ್ತಿದ್ದು. ಜಾರ್ಜ್ ಬೂಲ್ ತರ್ಕಬದ್ಧವಾಗಿ ಯಂತ್ರಾಗತ್ಯವನ್ನು ಮಂಡಿಸಿದರೆ, 1940ರಲ್ಲಿ ಅಲನ್ ಟ್ಯೂರಿಂಗ್ ಕಂಪ್ಯೂಟೇಷನ್ ಸಿದ್ಧಾಂತವನ್ನು ಮುಂದಿಟ್ಟರು. ಮನುಷ್ಯನ ಮೆದುಳಿನ ಮೂಲಕ ಸಾಧ್ಯವಾಗುವ ಗಣಿತವನ್ನು ಇಂಥ ಯಂತ್ರಗಳು ಇನ್ನಷ್ಟು ವೇಗವಾಗಿಯೂ ನಿಖರವಾಗಿಯೂ ಮಾಡಬಲ್ಲವು ಎಂಬ ಆ ತಾರ್ಕಿಕ ಸಿದ್ಧಾಂತದ ಫಲವೇ ಇಂದಿನ ಕೃತಕ ಜ್ಞಾನ ಕ್ಷೇತ್ರ.

ಜಾನ್ ಮೆಕಾರ್ಥಿ, ಮರ್ವಿನ್ ಮಿನ್ಸ್ಕಿ, ಅಲೆನ್ ನೆವೆಲ್, ಆರ್ಥರ್ ಸ್ಯಾಮ್ಯುಯಲ್ ಹಾಗೂ ಹರ್ಬರ್ಟ್ ಸಿಮ್ಸನ್ ಅವರನ್ನು ಒಳಗೊಂಡ ಸಂಶೋಧಕರ ಸಮಾವೇಶ 1956ರಲ್ಲಿ ಡಾರ್ಟ್‌ಮೌತ್ ಕಾಲೇಜಿನಲ್ಲಿ ನಡೆದಿತ್ತು. ಈ ದಿಗ್ಗಜರು ಹಾಗೂ ಅವರ ವಿದ್ಯಾರ್ಥಿಗಳು ಕಂಪ್ಯೂಟರ್